## ಅಧ್ಯಾಯ - 2

# ದೇವರು ಲೋಕವನ್ನು ಎಷ್ಟೋ ಪ್ರೀತಿಸಿದನು

## ದೇವರ ಯೋಜನೆ :

''ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು: ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು ಯೋಹಾರ ೩ : ೧೬

ದೇವರು ಈ ಸುಂದರವಾದ ಲೋಕವನ್ನು ಉಂಟು ಮಾಡಿದನು. ಆತನನ್ನು ಕ್ರಮವಾಗಿ ಆತನ ಚಿತ್ತದ ಪ್ರಾಕಾರ ಸೇವಿಸಿ ಸ್ತುತಿಸಬೇಕು. ಆದರೆ ದೇವರ ಈ ಚಿತ್ತವನ್ನು ನಾನು ನೀನು ಪ್ರಾರಂಭದಿಂದ ಇಲ್ಲಿಯವರೆಗೆ ಹಾಳು ಮಾಡಿದೆವು. ನಾವೆಲ್ಲರೂ ದೇವರಿಗೆ ವಿರೋಧಿಗಳಾದೆವು, ದೇವರು ಇಲ್ಲದೇ ಜೀವಿಸಲು ಪ್ರಾರಂಬಿಸಿದೆವು ಸತ್ಯವೇದವು ಇದನ್ನೇ ಪಾಪವೆಂದು ಹೇಳುತ್ತದೆ. ಇದರಿಂದಲೇ ಮನುಷ್ಯರೆಲ್ಲರೂ ಭಯಂಕರವಾದ ಸ್ಥಿತಿಗೆ ಬಿದ್ದುಹೋಗಿ ಎಲ್ಲವನ್ನು ಅಂದರೆ ದೇವರ ಕೃಪೆಯನ್ನು ಶಾಂತಿಯನ್ನು ಹೊಂದದೇ ಹೋದೆವು.

## ದೇವರ ಮಗನು

''ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ'' ರೋಮಾ ೩ : ೨೩

ನಾವು ನಮ್ಮ ಪಾಪಗಳಿಂದು ಕಷ್ಟಗಳನ್ನು ಅನುಭವಿಸುತ್ತಿದ್ದೇವೆ. ಮತ್ತು ದೇವರನ್ನು ತಿರಸ್ಕರಿಸಿದ್ದೇವೆ. ದೇವರು ಅದೇ ರೀತಿಯಲ್ಲಿ ನಮ್ಮನ್ನು ತಿರಸ್ಕರಿಸಿದ್ದಾನೆ. ಆದರೆ ದೇವರು ತಾನು ಮಗನ ರೂಪದಲ್ಲಿ ಈ ಲೋಕಕ್ಕೆ ಬಂದು ನಮಗಾಗಿ ಅನೇಕ

ಹಿಂಸೆಯನ್ನು ಹೊಂದಿದ್ದಾರೆ. ನಾವು ಪಾಪವನ್ನು ಮಾಡಿದೇವೆ. ಯೇಸು ಕ್ರಿಸ್ತನಾದರೊ ಪರಿಶುದ್ದನು. ಯೇಸು ನಮ್ಮ ಪಾಪಗಳಿಗಾಗಿ ದುಖಿ:ಸಿ ಆ ಪಾಪಗಳನ್ನು ತನ್ನ ಮೇಲೆ ಹಾಕಿಕೊಂಡು ನಮ್ಮ ಬದಲಾಗಿ ಆತನೇ ಶಿಲುಬೆಯ ಮರಣವನ್ನು ಹೊಂದಿದನು. ಮತ್ತು ಮರಣವನ್ನು ಜಯಿಸಿ ಅಂದರೆ ಮರಣದಿಂದ ಜೀವದಲ್ಲಿ ಎದ್ದು ಬಂದು ಪುನರುತ್ಥಾನ ಹೊಂದಿ ನಾವು ಮರಣವನ್ನು ಜಯಿಸುವಂತೆ ಮಾಡಿದ್ದಾನೆ. ಹೀಗೆ ನಮಗೆ ದೇವರಲ್ಲಿ ಒಳ್ಳೆಯ ಸಂಭಂಧವನ್ನು ಕೊಟ್ಟಿದ್ದಾನೆ.

## ದೇವರ ಕ್ಷಮಾಪಣೆ

''ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು: ಅವುಗಳನ್ನು ಒಪ್ಪಿಕೊಂಡು ಬಿಟ್ಟುಬಿಟುವವನಿಗೆ ಕರಣೆ ದೊರೆಯುವುದು''.


ಜ್ಞಾನೋಕ್ತಿಗಳು ೨೮ : ೧೩

ನಾವು ದೇವರೊಂದಿಗೆ ಸಮಾಧಾನವನ್ನು ಹೊಂದುವ ಮೊದಲು ನಮ್ಮ ತಿರುಗುಬಾಟಕ್ಕೆ ಬಹಳವಾಗಿ ಚಿಂತಿಸಬೇಕು. ಮತ್ತು ಯೇಸುಕ್ರಿಸ್ತನು ನನಗಾಗಿ ನನ್ನೆ ಪಾಪಗಳಿಗಾಗಿತನ್ನ ಶುದ್ಧ ರಕ್ತವನ್ನು ಸುರಿಸಿ ಮರಣ ಹೊಂದಿದನೆಂದು ನಂಬಬೇಕು. ಹೀಗೆ ಯೇಸು ನಮ್ಮನ್ನು ಕ್ಷಮಿಸಿದಾಗ ನಾವು ಆತನಲ್ಲಿ ಶಾಂತಿಯನ್ನು ಪಡೆದು ಆತನಲ್ಲಿ ಜೀವಿಸಲು ಸಾಧ್ಯತಾಗುತ್ತದೆ. ಇದೇ ಪುನ: ಜನಿಸುವುದಾಗಿದೆ. ಯಾಕೆಂದರೆ ನಾವು ದೇವರಿಂದ ನೂತನ ಜೀವನವನ್ನು ಹೊಂದುತ್ತೇವೆ. ದೇವರು ನಮ್ಮಲ್ಲಿ ತನ್ನ ಪವಿತ್ರ ಆತ್ಮನನ್ನು ಇರಿಸುತ್ತಾರೆ ಆತನು ನಾವು ದೇವರೊಂದಿಗೆ ಜೀವಿಸಲು ಸಹಾಯ ಮಾಡುತ್ತಾನೆ.


## ದೇವರ ಉತ್ತರ

ಯೇಸು ಅವನಿಗೆ ''ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ.


1. **ಮನುಷ್ಯನ ಸಮಸ್ಯೆ**
   **- ಬೇರೆಯಾಗುವುದು**





2. **ಮನುಷ್ಯನ ಸಾಧನೆಗಳು**
   **- ನಿಷ್ಪಯೋಜನೆಗಳು**




3. **ದೇವರ ಪರಿಹಾರ**
   **- ಶಿಲುಬೆ**




4. **ಮನುಷ್ಯನ ಉತ್ತರ**
   **- ಯೇಸುಕ್ರಿಸ್ತನನ್ನು ನಂಬುವುದು**



ನನ್ನ ಮೂಲಕವಾಗಿ ಹೊರತು ಯಾರು ತಂದೆಯ ಬಳಿಗೆ ಬರುವದಿಲ್ಲ''.
ಯೋಹಾನ ೧೪ : ೬

ದೇವರೊಡನೆ ಸಮಾಧಾನಹೊಂದಲು ಮಾನವನು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾನೆ. ಒಳ್ಳೆಯ ಕ್ರಿಯೆಗಳು, ಪ್ರೀತಿ, ಮತ್ತು ಕುಲದ ಮೂಲಕವಾಗಿ ರಕ್ಷಣೆ ಹೊಂದಲು ಸಾದ್ಯವಿಲ್ಲ. ಅದು ದೇವರಿಂದ ಬರುವ ಸಮಾಧಾನವಲ್ಲ. ದೇವರ ಉತ್ತರವು ಯೇಸುಕ್ರಿಸ್ತನೇ ಆಗಿದ್ದಾನೆ.

## ನಮ್ಮ ಅವಕಾಶಗಳು

''ಅದೇನಂದರೆ, ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು. ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣಮಾಡಿ ನಮ್ಮನ್ನು (ನನ್ನನ್ನು) ಶುದ್ಧಿಮಾಡುತ್ತದೆ''.

ರೋಮಾ ೧೦ : ೯, ೧ ಯೋಗಾನ ೧ : ೭

ನಾನು ಈ ಲೋಕದ ಜನರನ್ನು ತೀರ್ಪು ಮಾಡಲು ಒಂದು ದಿನ ಬೇಗನೇ ಬರುತ್ತೇನೆಂದು ಸತ್ತವರಿಗೂ ಬದುಕಿರುವ ಮನುಷ್ಯರಿಗೆ ಯೇಸು ಹೇಳಿದ್ದಾನೆ. ಈ ತೀರ್ಪು ನಡೆದಾಗ ಯೇಸುವನ್ನು ನಂಬಿದವರು ಅವರ ಸನ್ನಿದಿಯಲ್ಲಿ ಯುಗಯುಗಗಳು ಸಮಾಧಾನದಿಂದ ಜೀವಿಸುವರು. ನಾವು ದೇವರನ್ನು ತಿರಸ್ಕರಿಸಿದರೆ, ದೇವರ ಚಿತ್ತವನ್ನು ಮರೆತರೆ ಅದಕ್ಕೆ ಸರಿಯಾದ ಶಿಕ್ಷೆಯನ್ನು ಅನುಭವಿಸುತ್ತೇವೆ. ಅಂದರೆ ಪ್ರೀತಿ, ಸ್ನೇಹ, ನೀರೀಕ್ಷಣೆ ಇಲ್ಲದ ನಿತ್ಯ ನರಕವನ್ನು ಅನುಭವಿಸುತ್ತೇವೆ. ದೇವರು ನಮಗೆ ಅನನೊಂದಿಗೆ ಇರುವ ಅವಕಾಶವನ್ನು ತೋರಿಸಿದ್ದಾರೆ ಅದನ್ನು ಈ ದಿನವೇ ನಾವು ಆರಿಸಿಕೊಳ್ಳಬೇಕು. ಅದನ್ನು ನಾವು ತಿರಸ್ಕರಿಸಿದರೆ, ನಮ್ಮ ಜೀವನಕ್ಕೆ ಬೆಲೆಯೇ ಇಲ್ಲ. ಆದುದರಿಂದ ನೀನು ಬಯಸುವುದು ನರಕವೋ, ದೇವರೊಂದಿಗೆ ನಿತ್ಯ ಜೀವವೋ ನೀವೇ ಆಲೋಚನೆ ಮಾಡು.

## ಸಂಪೂರ್ಣರಾಗಲು ಜೀವವು ಅವಶ್ಯ

> ''ನಾನಾದರೂ ಅವುಗಳಿಗೆ ಜೀವವು ಇರಬೇಕೆಂತಲೂ ಸಮೃದ್ಧಿಯು ಇರಬೇಕೆಂತಲೂ ಬಂದೆನು.'' ಯೋಹಾನ ೧೦ : ೧೦

ದೇವರು ಈ ಲೋಕವನ್ನು ಬದಲಾಯಿಸಬೇಕೆಂದು ಆರಿಸಿದ್ದಾನೆ. ಅದು ನನ್ನಿಂದ ಹಾಗೂ ನಿನ್ನಿಂದ ದೇವರು ನಮ್ಮ ಹೃದಯದಲ್ಲಿ ವಾಸ ಮಾಡುವುದರಿಂದ ಆತನು ಪವಿತ್ರ ಆತ್ಮನನ್ನು ನಮ್ಮಲ್ಲಿ ವಾಸಮಾಡುವುದರ ಮೂಲಕ ದೇವರು ನಮ್ಮಲ್ಲಿ ಜೀವಿಸುವವನಾಗಿದ್ದಾನೆ.

## ನಮ್ಮ ಉತ್ತರ

ಯೇಸುಕ್ರಿಸ್ತನು ನಮ್ಮಲ್ಲಿ ಕಾರ್ಯಮಾಡಲು ಸುಲಭವಾದ ನಾಲ್ಕು-ಹಂತಗಳಿವೆ.

೧. ನಾವು ದೇವರಿಗೆ ಇಷ್ಟವಾದ ರೀತಿಯಲ್ಲಿ ಯೇಸು ಕ್ರಿಸ್ತನು ತೋರಿಸಿದ ಆತನ ಮಾರ್ಗದಲ್ಲಿ ನಡೆಯುವುದು.

೨. ಯೇಸುಕ್ರಿಸ್ತನನ್ನು ನಂಬಿ ಆತನ ರಕ್ತದ ಮೂಲಕವಾಗಿ ನಮ್ಮ ಪಾಪಗಳಿಂದ ವಿಮುಕ್ತಿಯನ್ನು ಪಡೆದು ರಕ್ಷಣೆಯನ್ನು ಹೊಂದುವುದು.

೩. ನಾವು ಯೇಸುಕ್ರಿಸ್ತನನ್ನು ಯೇಸು ದೇವರ ಮಗನೆಂದು ಆತನು ಶಿಲುಬೆಯಲ್ಲಿ ನಮ್ಮ ಪಾಪಗಳಿಗಾಗಿ ಸತ್ತು ದೇವರೊಡನೆ ನಮಗೆ ಸಮಾಧಾನವನ್ನು ಉಂಟುಮಾಡಿದ್ದಾನೆಂದು ನಂಬುದವುದು.

೪. ದೇವರು ನಮಗಾಗಿ ಯೇಸುಕ್ರಿಸ್ತನನ್ನು ಮರಣದಿಂದ ಎಬ್ಬಿಸಿ, ಮರಣದ ಮೇಲೆ ಜಯವನ್ನು ಕೊಟ್ಟು ತಂದೆಯ ಬಲಗಡೆಯಲ್ಲಿ ಕುಳಿತಿದ್ದಾನೆಂದು ನಂಬುವುದು. ಹೀಗೆ ಯೇಸುಕ್ರಿಸ್ತನು ನಮಗೆ ರಕ್ಷಕನಾಗಿದ್ದಾನೆಂದು ತಿಳಿದು ನಮ್ಮ ಜೀವನ ಕಾಲದಲೆಲ್ಲಾ ಯೇಸುವನ್ನು ಸ್ತುತಿಸುತ್ತಾ ಆತನನ್ನು ನಂಬಿ ಸಂಪೂರ್ಣ ಹೃದಯದಿಂದ ಆತನನ್ನು ಆರಾದಿಸುತ್ತಾ ನಮ್ಮ ವಿದೇಯತೆಯನ್ನು ತೋರಿಸುವುದು.

## ದೇವರ ನಿಶ್ಚಯತೆ

ಹೀಗೆ ಯೇಸುಕ್ರಿಸ್ತನನ್ನು ನೀನು ಅಂಗೀಕರಿಸುವುದರ ಮೂಲಕ ಎಂದೂ ನೀನು ಮಾಡದ ಶ್ರೇಷ್ಟವಾದ ಪ್ರಾರ್ಥನೆಯನ್ನು ನೀನು ಮಾಡುತ್ತಿರುವೆ. ಇದನ್ನು ಧ್ಯಾನ ಮಾಡಿದ ಮೇಲೆ ನೀನು ಪ್ರಾರ್ಥಿಸಿದರೆ ನಿಜವಾದ ಕ್ರೈಸ್ತವನೆಂದು ತೋರಿಸಿಕೊಡುತ್ತೀ. ದೇವರು ಬಹು ನಂಬಿಗಸ್ಥನು. ಆತನು ಮಾಡಿದ ವಾಗ್ದಾನವನ್ನು ಎಂದಿಗೂ ಮರೆಯುವುದಿಲ್ಲ. ಆತನು ಸುಳ್ಳಾಡುವವನಲ್ಲ. ಆದುದರಿಂದ ನೀನು ಯೇಸುಕ್ರಿಸ್ತನಲ್ಲಿ ಪಾಲುಹೊಂದಿ ಆತನ ಶಿಷ್ಯವಾಗಿ ಇರುತ್ತೀಯ. ಇದು ನೀನು ತೆಗೆದುಕೊಂಡ ಮೊದಲನೆಯ ಮೆಟ್ಟಿಲು. ಹೀಗಿ ದೇವರೊಂದಿಗೆ ನೀನು ಒಂದು ಚಿಕ್ಕಮಗುವಿನಂತೆ ಬೆಳೆಯಲು ಸಾಧ್ಯವಾಗತ್ತದೆ. ಇದೇ ನೀನು ದೇವರಿಗೆ ತೋರಿಸುವ ವಿದೇಯತೆಯ ಜೀವನವಾಗಿದೆ. ಮುಂದೆ ನೀವು ಈ ಪುಸ್ತಕವನು ಧ್ಯಾನಿಸುವಾಗ ದೇವರು ನಿನಗೆ ಎಲ್ಲವನ್ನು ವಿವರಿಸುತ್ತಾನೆ.

## ಪ್ರಶ್ನೆಗಳು ಮತ್ತು ವಿಷಯಗಳು :

೧. ಈ ಕೆಳಗಿನ ವಾಕ್ಯಗಳು ದೇವರು ಯಾತಕ್ಕಾಗಿ ತನ್ನ ಮಗನನ್ನು ಈ ಲೋಕಕ್ಕೆ ಕಳುಹಿಸಿದನೆಂದು ಹೇಳುತ್ತವೆ.

(ಯೊಹಾನ ೩ : ೧೬-೧೮ ಯೊಹಾನ ೧೭ : ೨)

೨. ದೇವರನ್ನು ಸಂತೋಷಪಡಿಸದೇ ಇರುವುದರಿಂದ ಬರುವ ಪ್ರತಿಫಲವೇನು?

(ಯೆಶಾಯ ೫೯ : ೨)

೩. ನಾವು ಏನು ಮಾಡಬೇಕು ?

(ಮಾರ್ಕ ೧ : ೧೫, ಅ.ಶಾ. ೩ : ೧೯)

೪. ಕ್ಷಮಾಪಣೆ ಎಂದರೆ ಒಪ್ಪಿಕೊಳ್ಳುವುದು ಮತ್ತು ಮರೆತು ಹೋಗುವುದು

(೧ ಯೋಹಾನ ೧ : ೯, ೭)

೫. ನಾವು ದೇವರನ್ನು ಪ್ರೀತಿಸಿದರೆ ಏನು ಮಾಡಬೇಕು.

(ಯೋಹಾನ ೧೪ : ೨೩)

೬. ನಾವು ಯೇಸುಕ್ರಿಸ್ತನನ್ನು ನಂಬಿದಾಗ ಪವಿತ್ರ ಆತ್ಮನನ್ನು ಹೊಂದುತ್ತೇವೆಯೇ?

(ಎಫೆಸಿ ೧ : ೧೩ ; ೧೪)

೭. ನಿನ್ನನ್ನು ಧೈರ್ಯಗೋಳಿಸುವ ಈ ವಾಕ್ಯಗಳನ್ನು ಓದು. ಯೋಹಾನ ೧ : ೧೨, ರೋಮಾ ೩ : ೨೩, ೬ : ೨೩, ಗಲಾತ್ಯ ೫ : ೧೯-೨೧ ಪ್ರಕರಣೆ ೨೧ : ೮, ರೋಮಾ ೧೦ : ೯ , ೧೦, ೧ ಯೋಹಾನ ೧ : ೯, ೭ ಎಫೆಸಿ ೧ : ೭, ರೋಮಾ ೮ : ೧

## ಪ್ರಾರ್ಥನೆ :

ಸರ್ವಶಕ್ತವಾದ ಯೇಸುವೇ, ಹೌದು ನಿನ್ನ ಮಹಿಮೆಯನ್ನು ಹೊಂದಲು ನಾನು ಇಷ್ಟಪಡುತ್ತಿದ್ದೇನೆ. ನಾನು ಮಾಡಿದ ಪಾಪವನ್ನು ಕ್ಷಮಿಸು. ನಿನ್ನ ಮಾರ್ಗದಲ್ಲಿ ನಡಿಸು. ನನ್ನ ಸ್ಥಾನದಲ್ಲಿ ನೀನು ಶಿಲುಬೆಯಲ್ಲಿ ಮರಣವನ್ನು ಹೊಂದಿದಕ್ಕಾಗಿ ಸ್ತೋತ್ರ. ಯೇಸು ನೀನು ಮರಣವನ್ನು ಜಯಿಸಿದಕ್ಕಾಗಿ ಸ್ತೋತ್ರ. ನೀನು ನನ್ನ ಜೀವನದಲ್ಲಿ ರಕ್ಷಕನಾಗಿಯೂ, ಇರುವುದಕ್ಕಾಗಿ ಸ್ತೋತ್ರ. ನನಗೆ ಅನುಗ್ರಹಿಸಿದ ಪವಿತ್ರ ಆತ್ಮಕ್ಕಾಗಿ ಸ್ತೋತ್ರ ನನ್ನ ಪ್ರಾರ್ಥನೆಯನ್ನೆ ಕೇಳಿ ನನ್ನ ಜೀವನ ಕಾಲದಲ್ಲೆಲ್ಲಾ ನನ್ನೊಂದಿಗೆ ಇರುತ್ತೇನೆಂದು ಮಾಡಿದ ವಾಗ್ದಾನಕ್ಕಾಗಿ ನಿನ್ನನ್ನು ನಂಬಿ ಯೇಸು ಕ್ರಿಸ್ತನ ಪರಿಶುದ್ಧವಾದ ಹೆಸರಿನಲ್ಲಿ ಪ್ರಾರ್ಥಿಸಿ ಸ್ತುತಿಸುತ್ತೇನೆ. ಆಮೆನ್.